Regd No BC 155 28-11-1969

SATYAVADI Daily, MYSORE 4 ★ 53 rd Year of Publication

ಶ್ರೀ ಸತ್ಯ ನಾರಾಯಣ
ಬೆನಿಫಿಟ್ ಸ್ಕೀಂ
(ಚಾಮುಂಡೇಶ್ವರಿ ಟಾಕೀಸ್ ಕಟ್ಟಡ)
203, ಸಯ್ಯಾಜಿರಾವ್ ರಸ್ತೆ,
ಮೈಸೂರು-1
ಮೇಲ್ಕಂಡ ಯೋಜನೆಗೆ
ಇಂದೇ ಚಂದಾದಾರರಾಗಿರಿ
ಅದರ ಫಲವನ್ನು ಪಡೆಯಿರಿ

ಸತ್ಯವಾದಿ

Golden Jubilee Celebrated Paper

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣ ರಾವ್ [2 ಪೈಸೆ

ಹದಿನಾಲು ಕಾನೆಂಟುಗಳಿಗೆ ಸರ್ಕಾರದಿಂದ ನೋಟೀಸ್

ರ ಎ

ಕಾನ್ವೆಂಟು ಸ್ಕೂಲುಗಳಿಗೆ ನೋಟೀಸು

ನಾಗಪುರ— 14 ಕಾನ್ವೆಂಟು ಸ್ಕೂಲುಗಳು ಮಹಾತ್ಮಾ ಗಾಂಧಿ ಶತಮಾನೋತ್ಸವವನ್ನು ನೆರವೇರಿಸಲಿಲ್ಲವೆಂದೂ, ಅವುಗಳಿಗೆ ಏಕೆ ಕಾಸ್ ನೋಟೀಸು ಕೊಡಲಾಗಿದೆಯೆಂದೂ ಮಹಾರಾಷ್ಟ್ರ ಶಾಸನ ಸಭೆಯಲ್ಲಿ ತಿಳಿಸಲಾಯಿತು.

★

ತಿಂಡಿ ಬೆಲೆ ಇಳಿಸುವ

ಹಾಸನ— ಸ್ಥಳೀಯ ಹೋಟಲಿನವರು, ವಿರುದ್ಧ ಚಳುವಳಿ ಇದ್ದರೂ ತಿಂಡಿ ಬೆಲೆ ಇಳಿಸಲು ತಿರಸ್ಕರಿಸಿರುವರು.

○

ಹುಲಿಗಳ ಜನಗಣತಿ

ನವದೆಹಲಿ— ಭಾರತದಲ್ಲಿನ ಹುಲಿಗಳ ಜನಗಣತಿ ತೆಗೆದುಕೊಳ್ಳಬೇಕೆಂದು ಅರಣ್ಯಗಳ ಮುಖ್ಯಾಧಿಕಾರಿ ಶ್ರೀ ಆರ್ ಸಿ ಸೋನಿ ಹೇಳಿದರು.

★

200 ರಾಜಕೀಯ ಖೂನಿಗಳು

ಕಲ್ಕತ್ತಾ— ಸಂಯುಕ್ತ ರಂಗದ ಆಡಳಿತ ಕಾಲದಲ್ಲಿ 9 ತಿಂಗಳಲ್ಲಿ 200 ರಾಜಕೀಯ ಖೂನಿಗಳು ನಡೆದಿವೆಯೆಂದು ಪ್ರಕಟವಾಗಿದೆ.

ಇಂದಿರಾ ಕಾಂಗ್ರೆಸ್ ಮಹಾಸಭೆ

ಬೊಂಬಾಯಿ— ಮುಂದಿನ ತಿಂಗಳಲ್ಲಿ ಕರೆಯಲಾಗಿರುವ ಕಾಂಗ್ರೆಸ್ಸು ಮಹಾಸಭೆಯನ್ನು ಶಿವಾಜಿ ಪಾರ್ಕಿನಲ್ಲಿ ಅಭವಾ ಆಜಾದ್ ಮೈದಾನದಲ್ಲಿ ನಡೆಸಲಾಗುವುದೆಂದು ಮಹಾರಾಷ್ಟ್ರ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ವಸಂತರಾವ್ ಪಾಟೀಲ್ ಹೇಳಿದರು — ಇದಕ್ಕೆ ಒಟ್ಟು ಖರ್ಚು ರೂ. 10 ಲಕ್ಷ ಆಗುವುದೆಂದೂ, ಪ್ರತಿಯೊಬ್ಬ ರೂ ರೂ 1 ರಿಂದ 5 ರವರೆಗೆ ಡೊನೇಷನ್ ನೀಡಲು ಸ್ವಾಗತಿಸಲಾಗುವುದೆಂದೂ, ವ್ಯಾಪಾರ ಮತ್ತು ವಾಣಿಜ್ಯ ಪಂಗಡದವರು ಸಂಪೂರ್ಣ ಸಹಕಾರ ನೀಡಲು ಒಪ್ಪಿರುವರೆಂದೂ 3500 ಪ್ರತಿನಿಧಿಗಳೂ ಸೇರಿ 10 ಸಾವಿರ ಪ್ರತಿನಿಧಿಗಳು ಭಾಗವಹಿಸುವರೆಂದೂ ಹೇಳಿದರು.

○

ಲಾಠಿಛಾರ್ಜು, ಅಶ್ರುವಾಯು ಪ್ರಯೋಗ

ಕಲ್ಕತ್ತಾ— ಒಟ್ಟಾರೆ ಮತ್ತು ಚಿಲ್ಲರೆ ಪದಾರ್ಥಗಳ ವ್ಯಾಪಾರ ಕೇಂದ್ರವಾದ ಬಾರಾ ಬಜಾರು ಭಾಗದಲ್ಲಿ ಹೊಡೆದಾಡುತ್ತಿದ್ದ ಎರಡು ಗುಂಪುಗಳನ್ನು ಚದುರಿಸಲು ಪೋಲೀಸರು ಲಾಠಿಛಾರ್ಜು ಮಾಡಿ ಅಶ್ರುವಾಯು ಪ್ರಯೋಪಿಸಿದರು.

★

ರಾಜ್ಯದ ಎಂ ಪಿ ಸಿ ಸಿ ಸಸ್ಪೆಂಡ್

ಬೆಂಗಳೂರು— ಪ್ರಧಾನಿ ಕಾಂಗ್ರೆಸಿನ ಅಧ್ಯಕ್ಷ ಶ್ರೀ ಸುಬ್ರಹ್ಮಣ್ಯಂರು ತಾವು ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯನ್ನು ಸಸ್ಪೆಂಡು ಮಾಡಿರುವುದಾಗಿ ಡೆಲ್ಲಿಯಲ್ಲಿ ತಿಳಿಸಿದರು — ಅದರ ಬದಲು ಒಂದು ಹೆಂಗಾಮಿ ಎಂಪಿಸಿಸಿ ನೇಮಕ ಮಾಡಿದರು — ಈ ಸಸ್ಪೆಂಷನ್ನನ್ನು ತಾವು ನಿರ್ಲಕ್ಷಿಸುವುದಾಗಿ ಎಂ ಪಿ ಸಿ ಸಿ ಅಧ್ಯಕ್ಷ ಡಾ॥ ನಾಗಪ್ಪ ಆಳ್ವಾರರು ಹೇಳಿದರು.

●

ಅನ್ಯಾಯ

ಬೆಂಗಳೂರು— ಎಂ ಪಿ ಸಿ ಸಿ ಸಸ್ಪೆಂಡು ಮಾಡಿರುವದು ಅನ್ಯಾಯವೆಂದು ಮುಖ್ಯ ಮಂತ್ರಿ ಶ್ರೀ ವೀರೇಂದ್ರ ಪಾಟೀಲರು ಹೇಳಿದರು.

★

ಇಂದಿರಾ ಕಾಂಗ್ರೆಸ್ ಪಿ ಸಿ ಸಿ

ಪಶ್ಚಿಮ ಬಂಗಾಳಾಕ್ಕೆ ಒಂದು ಪ್ರದೇಶ ಕಾಂಗ್ರೆಸ್ ಸಮಿತಿ 2 ದಿನಗಳ ಹಿಂದೆ ನೇಮಿಸಲಾಯಿತು — ಗುಜರಾತಿನಲ್ಲಿ ಸ್ಥಾಪಿಸುವ ಕಾರ್ಯ ಕೊಳ್ಳಲಾಗಿದೆ — ತಮಿಳುನಾಡುವಿನಲ್ಲೂ ಸ್ಥಾಪಿಸಲಾಗುವುದು ಎಂದು ಅಧ್ಯಕ್ಷ ಶ್ರೀ ಸುಬ್ರಹ್ಮಣ್ಯಂ ಹೇಳಿದರು

★

ಕಟ್ಟಡ ಕುಸಿದು ಒಬ್ಬನ ಸಾವು

ಮೈಸೂರು— ಹಳ್ಳದಕೇರಿ ಹತ್ತಿರದಲ್ಲಿ ಒಂದು ಮನೆಯ ಮೇಲ್ಛಾವಣಿ ಮತ್ತು ಗೋಡೆ ಕುಸಿದು ಒಬ್ಬ ಸತ್ತು ಮೂವರು ಗಾಯಗೊಂಡರೆಂದು ಗೊತ್ತಾಗಿದೆ.

●

ಮದರಾಸು— ರಷ್ಯಾದಿಂದ 1970 ರಲ್ಲಿ ಕೊಳ್ಳಲಿದ್ದ 1000 ಟ್ರಾಕ್ಟರುಗಳ ಕಂಟ್ರಾಕ್ಟು ಬೆಲೆ ವಿಷಯದಲ್ಲಿ ತಿಕ್ಕಾಟ ಹುಟ್ಟಿರುವದರಿಂದ ಸಿಲ್ಲಿಸಲಾಗಿದೆ.

ಆಳ್ವಾರರ ಹೇಳಿಕೆಗೆ ಪಾಟೀಲರ ಒಪ್ಪಿತವಿಲ್ಲ

ಬೆಂಗಳೂರು— ಪ್ರಧಾನಿ ಇಂದಿರಾರವರು ಮೈಸೂರು ಸರಕಾರವನ್ನು ಉರುಳಿಸಲು ಪ್ರಯತ್ನಿಸುವರೆಂದು ಎಂ ಪಿ ಸಿ ಸಿ ಅಧ್ಯಕ್ಷ ಡಾ॥ ನಾಗಪ್ಪ ಆಳ್ವಾರವರು ಹೇಳಿರುವುದನ್ನು ತಾವು ಒಪ್ಪುವುದಿಲ್ಲವೆಂದು ಮುಖ್ಯ ಮಂತ್ರಿ ಶ್ರೀ ವೀರೇಂದ್ರ ಪಾಟೀಲರು ಬಹಿರಂಗವಾಗಿ ಹೇಳಿದರು ; ಮತ್ತು ತಮ್ಮ ಮಂತ್ರಿಮಂಡಲಕ್ಕೆ ಯಾವ ಅಪಾಯಕರವಿಲ್ಲವೆಂದು ಹೇಳಿದರು.

★

ಸರ್ವಂ ರಾಷ್ಟ್ರೀಕರಣಂ !

ನವದೆಹಲಿ— ಅಪರಿಮಿತವಾಗಿ ರಾಷ್ಟ್ರೀಕರಣ ಮಾಡಲಾಗುವುದೇ ಎಂಬ ವಿಷಯದಲ್ಲಿ ಖಂಡಿತವಾದ ಹೇಳಿಕೆ ಕೊಡಲು ಪ್ರಧಾನಿ ಇಂದಿರಾರವರು ರಾಜ್ಯ ಸಭೆಯಲ್ಲಿ ತಿರಸ್ಕರಿಸಿದರು.

★

ಕನ್ನಡಿಗರ ಕುಂದುಕೊರತೆ

ಬೆಂಗಳೂರು— ಬೆಳಗಾಂನ ಜ್ಯೋತಿ ಪುಲೆ ಕಾಲೇಜು ಶಿವಾಜಿ ವಿಶ್ವವಿದ್ಯಾಲಯಕ್ಕೆ ಆಫಿಲಿಯೇಟ್ ಆಗಲು ಸರ್ವಾನುಭೂತಿಯಿಂದ ಪರಿಶೀಲಿಸಿ, ಇದಕ್ಕೆ ಅನುಮತಿಸದಿರುವ ಕರ್ನಾಟಕ ವಿಶ್ವವಿದ್ಯಾಲಯದ ನಿರ್ಧಾರವನ್ನು ರದ್ದು ಪಡಿಸಲು ಮಹಾರಾಷ್ಟ್ರ ಮುಖ್ಯ ಮಂತ್ರಿ ಶ್ರೀ ನಾಯಿಕ್ ಮೈಸೂರು ಮುಖ್ಯ ಮಂತ್ರಿ ಶ್ರೀ ವೀರೇಂದ್ರ ಪಾಟೀಲರಿಗೆ ಬರೆದಿರುವದು ಪರ್ಯಾಲೋಚಿಸಲಾಗುತ್ತಿದೆಯೆಂದೂ, ಮುಖ್ಯ ಮಂತ್ರಿ ಶ್ರೀ ವೀರೇಂದ್ರ ಪಾಟೀಲರು ತಿಳಿಸಿರುವರು — ಮತ್ತು ಮಹಾರಾಷ್ಟ್ರ ಸರಕಾರ ಕನ್ನಡದಲ್ಲಿ ವಿದ್ಯಾಭ್ಯಾಸ ಸೌಕರ್ಯವನ್ನು ಮಾಡಿಲ್ಲವೆಂಬ ಅಕಲಕೋಟಿ, ಸೋಲಾಪುರದ ಕನ್ನಡಿಗರ ದೂರಿನ ಬಗ್ಗೆ ಈ ಕುಂದುಕೊರತೆ ಸರಿಪಡಿಸುವಂತೆ ತಿಳಿಸುವದಾಗಿಯೂ ಹೇಳಿದರು.

ತಾ॥ 28-11-69 ನೇ ಶುಕ್ರವಾರದಿಂದ
ಅಮೋಘ ಪ್ರಾರಂಭ ಪ್ರತಿದಿನ 3 ಪ್ರದರ್ಶನಗಳು
ಒಲಂಪಿಯಾ ಚಿತ್ರಮಂದಿರದಲ್ಲಿ
ಏಸ 2-15, 6-15 ಮತ್ತು 9-45 ಕ್ಕೆ ಜಾಯ್ ಫಿಲ್ಮ್ಸ್‌ರವರ
ಅತ್ಯುತ್ತಮ ಪೌರಾಣಿಕ ಸಂಗೀತ ಭರಿತ್ವರ್ಣರಂಜಿತ ಚಿತ್ರ
ಬಲರಾಮ್ ಶ್ರೀ ಕೃಷ್ಣ
(ಹಿಂದಿ)
ಪಾತ್ರ:- ಪೃಥ್ವಿರಾಜ ಕಪೂರ, ದಾರಾಸಿಂಗ್, ಸಾವಿತ್ರಿ, ಜೆಮಿನಿಗಣೇಶ್, ಅಜಾದ್ ಇನ್ನೂ ಮುಂತಾದವರು
ನಿರ್ದೇಶನ: ಚಂದ್ರಕಾಂತ್ ಸಂಗೀತ: ಸಿ ರಾಮಚಂದ್ರ

ಅಕ್ಕಿ ಉತ್ಪಾದನೆಯಲ್ಲಿ ಪ್ರಗತಿ

ಟೋಕಿಯೋ— ಜಪಾನಿನಲ್ಲಿಯ ಅಕ್ಕಿಯ ಉತ್ಪಾದನೆಯನ್ನು ಮುಂದಿನ ವರ್ಷ ಕಡೆ ಸಕ್ಷ 1.5 ಮಿಲಿಯ ಟನ್‌ಗಳಷ್ಟಾದರೂ ಕಡಮೆ ಮಾಡುವ ಯೋಜನೆಯನ್ನು ಸರ ಕಾರ ಒಪ್ಪಿದೆ.

ತಿಂಡಿ ಬೆಲೆ ಇಳಿಸಲು ಚಳವಳಿ

ಶಿವಮೊಗ್ಗ— ನಿನ್ನೆ ಹೋಟಲಿನವರಿಗೂ ವಿದ್ಯಾರ್ಥಿಗಳಿಗೂ ಘರ್ಷಣೆಯಾ ಯಿತು – ಹೋಟಲಿನವರು ವಿದ್ಯಾರ್ಥಿಗಳ ಮುಖಕ್ಕೆ ಮೆಣಸಿನಪುಡಿ ಎರೆಚಿದರೆಂದು ಆಪಾದಿಸಲಾಗಿದೆ – ಪೋಲೀಸರು ಗುಂಪನ್ನು ಚದುರಿಸಿದರು – ತಾವು ತಿಳಿಸಿರುವ ದ ರಕ್ಕೆ ಹೋಟಲಿನವರು ಒಪ್ಪುವವರೆಗೆ ಚಳವಳಿ ಮುಂದುವರಿಸುವದಾಗಿ ವಿದ್ಯಾರ್ಥಿ ಗಳು ಹೇಳಿರುವರು – ಮುಖ್ಯ ಹೋಟಲುಗಳ ಮುಂದೆ ಪಹರೆಹಾಕಲಾಗಿದೆ – ಬೀ ಗಳಲ್ಲಿ ರಿಜರ್ವ್ ಪೋಲೀಸರು ಗಸ್ತು ತಿರುಗುತ್ತಿರುವರು – ಈ ಚಳವಳದಿಂದ ಹಣ್ಣು ವ್ಯಾಪಾರಿಗಳಿಗೆ ಸುಗ್ಗಿಯಾಗಿದೆ — ತಿಂಡಿಗೆ ಹಾಕುತ್ತಿದ್ದ ದುಡ್ಡನ್ನು ಹಣ್ಣುಗಳಿಗೆ ಉಪಯೋಗಿಸುತ್ತಿದ್ದಾರೆ.

○ ನವದೆಹಲಿ— ಚೀನಾ ಸೈನ್ಯದಲ್ಲಿ ಘೋರ್ಕರಿಲ್ಲವೆಂದು ರಾಜ್ಯ ಸಭೆಯಲ್ಲಿ ತಿಳಿಸಲಾಯ್ತಿತು.

ಗೋರಕ್ಷಣಕ್ಕೆ ಚಂದಾ ಮತ್ತು ಡೊನೇರ್ಷ ಪಾವತಿಮಾಡುವ ಅಡ್ರೆಸ್

1 ಗೋರೆಕ್ಷಣ ಆಫೀಸ್, ಸತ್ಯವಾದಿಪ್ರೆಸ್ ಚಾಮರಾಜಪುರಂ, ಮೈಸೂರು.

2 ಶ್ರೀ ಬಿ ಜಿ ಶಾಸ್ತ್ರಿ, ಆಫರ್ ಮತ್ತು ಅಸ್ಟ್ಟಾಲಜರ್, 180 ನ್ಯೂ ಬ್ಲಾಕ್, ವಿದ್ಯಾರಣ್ಯಪುರಂ, ಮೈಸೂರು.

3 ಶ್ರೀ ಅನಂತನರಸಿಂಹಯ್ಯಂಗಾರ್, ಶಾಸ್ತ್ರಧರ್ಮಪ್ರಚಾರ ಸಭಾ ಹೊಂಗನೂರು, ಚಾಮರಾಜನಗರ ತಾಲ್ಲ್ಲ

SHAKTI

SUDHA

A Superb Tonic

ಪ್ರಮುಖ ವರ್ತಮಾನಗಳಿಗೆ ಆಕರ್ಷಣೀಯ ಲೇಖನಗಳಿಗೆ —

ಧಾರ್ಮಿಕ ವಿಚಾರಗಳಿಗೆ ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ

ಆದರಲ್ಲಿ ಜಾಹೀರಾತು ಪ್ರಕಟನೆ ಲಾಭದಾಯಕ

ಸ್ಥಳದಲ್ಲಿ ಚಂದಾ ತಿಂಗಳಿಗೆ 40 ಪೈಸೆ; ಆಂಚೆವಚ್ಚ ಸೇರಿ ವರ್ಷಕ್ಕೆ ರೂ 10-00

ಸೋಮವಾರ ಪಂಚಿಕೆ ವರ್ಷಕ್ಕೆ ರೂ. 2

ದೇಶದ ಹಿತಕಾಗಿ

ಕುಟುಂಬ ಯೋಜನೆ

ಅಖಿಲ ಭಾರತದಲಿ ಕೂಡಲೇ

ಗೋವಧೆ ನಿಷೇಧವಾಗಲಿ

ವುಡ್‌ಲಾಂಡ್ ಜಯಪ್ರದ 2ನೇ ವಾರ

ಶಿನಿ ಅಮೋಘ ಪ್ರಾರಂಭ

— ಮನಮೋಹಕ ಹಿಂದಿ ಚಿತ್ರ — ಈಸ್ಟ್‌ಮನ್ ಕಲರ್ —

ಹಮ್ ಸಾಯ

ಪಾತ್ರ : ಮಾಲಾಸಿನ್ಹಾ, ಜಾಯ್ ಮುಖರ್ಜಿ, ಶರ್ಮಿಳಾ ಟಾಗೂರ್

ಸಂಗೀತ : ಓ. ಪಿ. ನಯ್ಯರ್

[ದಿನ 3 ಪ್ರದರ್ಶನಗಳು]

ಆಪೆರಾ— 21-11-69 ರಿಂದ

.... ಅತ್ಯಮೋಘ ತಮಿಳು ಚಿತ್ರ ....

ದೈವಮಗನ್

ಪಾತ್ರ ; ಶಿವಾಜಿ ಗಣೇಶ್, ನಾಗೇಶ್, ಜಯಲಲಿತ

ದಿನ 3 ಆಟಗಳು

Help The Gorakshana



ಗೋರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳು ಹೆಚ್ಚಾಗಿ ನಡೆಯಲಿ

ಗೋರಕ್ಷಣಕ್ಕೆ ಬೆಂಬಲ ನೀಡಿ

Protectthe Cow

Quality Printing — Neat Binding

Lakshminarasimha Press

Sivarampet, Mysore

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysore